ಅಧ್ಯಕ್ಷರು – ಉಪ ಮುಖ್ಯಮಂತ್ರಿಗಳು ಬರುವವರೆಗೆ ನಿಮ್ಮದೇನಿದೆ ಕೇಳಿ ಅದೇನು ಪ್ರಸ್ತಾಪ ಮಾಡಿಬಿಡಿ ಅಷ್ಟರೊಳಗೆ ಅವರು ಬರುತ್ತಾರೆ

(ಉ) ಹಂಪಿಯಲ್ಲಿ ನಡೆಯುತ್ತಿರುವ ಭೂಗತ ಚಟುವಟಿಕೆಗಳ ಬಗ್ಗೆ

ಶ್ರೀ ಸಿ ಟಿ ರವಿ (ಚಿಕ್ಕಮಗಳೂರು) – ವಿಶ್ವ ಪರಂಪರೆಯ ಪಟ್ಟಿಯಲ್ಲಿರುವ ಹಂಪಿಯಲ್ಲಿ ನಡೆಯುತ್ತಿರತಕ್ಕಂಥ ಭೂಗತ ಚಟುವಟಿಕೆಗಳು, ಅವ್ಯವಹಾರ, ಮಾದಕ ವಸ್ತುಗಳ ಮಾರಾಟ, ಸಾಗಾಟ ಇತ್ಯಾದಿಗಳ ಬಗ್ಗೆ ನಿನ್ನೆ ಮತ್ತು ಇವತ್ತಿನ ಮುದ್ರಣದಲ್ಲಿ ವಿಜಯಕರ್ನಾಟಕ ಪತ್ರಿಕೆಯು ಒಂದು investigation report ಮಾಡಿದೆ ಈ investigation report ನಮ್ಮನ್ನು ಭಯಭೀತರನ್ನಾಗಿಸುತ್ತದೆ ಮತ್ತು ಒಂದು ಸಂಸ್ಕೃತಿಯ, ಪರಂಪರೆಯ ಹಿನ್ನೆಲೆಯ ತಾಣವಾಗಿರತಕ್ಕಂಥ ಹಂಪಿಯಲ್ಲಿ ನಡೆಯುತ್ತಿರತಕ್ಕಂಥದ್ದು, ಅಲ್ಲಿ ಅಕ್ರಮವಾಗಿ ತಲೆ ಎತ್ತಿರುವಂತಹ ಹೋಟೆಲ್‌ಗಳು, ಅಲ್ಲಿ ಎಲ್ಲ ರೀತಿಯ ಅನೈತಿಕ ಚಟುವಟಿಕೆಗಳು ನಡೆಯುತ್ತಿರತಕ್ಕಂಥದ್ದು, ವಿದೇಶೀಯರ ಮೋಜಿನ ಹೆಸರಿನಲ್ಲಿ ನಡೆಯುತ್ತಿರತಕ್ಕಂತಹ ಅನೈತಿಕ ಚಟುವಟಿಕೆಗಳು ಅವ್ಯಾಹತವಾಗಿ, ಬಹಿರಂಗವಾಗಿ ನಡೆಯುತ್ತಿರತಕ್ಕಂಥ ಮಾದಕ ವಸ್ತುಗಳ ದಂಧೆ ಅದೂ ಸ್ವತಃ ಗೃಹ ಸಚಿವರೇ ಉಸ್ತುವಾರಿ ಸಚಿವರಾಗಿರುವಂಥ ಜಿಲ್ಲೆಯೊಳಗಡೆ, ಅವರ ಮೂಗಿನ ಅಡಿಯಲ್ಲಿ ನಡೆಯುತ್ತಿರತಕ್ಕಂಥ ಈ ರೀತಿಯ ಚಟುವಟಿಕೆಗಳು ನಮ್ಮ ರಾಜ್ಯವನ್ನು ಅಪಾಯಕ್ಕೆ ದೂಡಿದೆ ಮತ್ತು ಐತಿಹಾಸಿಕ ಪರಂಪರೆ ಹೊಂದಿರುವ ಹಂಪಿಯೂ ಕೂಡ ಪ್ರತಿನಿತ್ಯ ಅತಿಕ್ರಮಣಕ್ಕೆ ಒಳಗಾಗುತ್ತಿರತಕ್ಕಂಥದ್ದರ ಬಗ್ಗೆ ಒಂದು ವಿಸ್ತೃತವಾದಂಥ ಲೇಖನ ಇದೆ ಈ ಲೇಖನವನ್ನು ಗೃಹ ಸಚಿವರು ಗಮನಿಸಿದ್ದಾರೆಂದು ನಾನು ಭಾವಿಸಿದ್ದೇನೆ ಹಾಗಾಗಿ, ಈ ಬಗ್ಗೆ ಸರ್ಕಾರ ಯಾವ ರೀತಿ ಇದನ್ನು ತಡೆಯಲಿಕ್ಕೆ ಏನು ಕ್ರಮ ಕೈಗೊಂಡಿದೆ? ಮತ್ತು ಅಲ್ಲಿರತಕ್ಕಂಥ ಅತಿಕ್ರಮಣಗಳನ್ನು ತಡೆಯಲಿಕ್ಕೆ, ಅಕ್ರಮವಾಗಿ ತಲೆ ಎತ್ತಿರತಕ್ಕಂಥ ಹೋಟೆಲ್‌ಗಳನ್ನು ನಿಲ್ಲಿಸಲಿಕ್ಕೆ, ಮೋಜಿನ ಹೆಸರಿನಲ್ಲಿ ನಡೆಯುತ್ತಿರತಕ್ಕಂಥ ಅಶ್ಲೀಲತೆಗಳನ್ನು ತಡೆಗಟ್ಟಲಿಕ್ಕೆ, ಮಾದಕ ವಸ್ತು ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲಿಕ್ಕೆ ಯಾವ ರೀತಿಯ ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) – ಹಂಪಿಯ ಪರಿಸರದಲ್ಲಿ ಈ ತರಹದ ಮಾದಕ ದ್ರವ್ಯಗಳು, ವಿಲಾಸಿ

ಜೀವನ ಮಾಡುವಂಥ ವಿದೇಶೀಯರು, ಅವರಿಂದ ದಾರಿ ತಪ್ಪಿರುವ ನಮ್ಮ ಯುವಕರು, ಇವರೆಲ್ಲರೂ ಕೂಡ ಗೋವಾ, ಗೋಕರ್ಣ ಮತ್ತು ಹಂಪಿಗೆ ಬರುತ್ತಾರೆ ಈ ವಿಚಾರಗಳ ಬಗ್ಗೆ ಬಹಳ ವರ್ಷಗಳಿಂದ ಹೋರಾಟ ನಡೆಯುತ್ತಿದೆ ಆದರೆ, ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಕೆಲವೇ ಕೆಲವು ಹೋಟೆಲ್‌ಗಳನ್ನು ಮಾತ್ರ ಕೆಡವಿದ್ದಾರೆ ಉಳಿದಿರತಕ್ಕಂಥದ್ದು ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಕಬ್ಬಿನ ಗದ್ದೆಗಳಲ್ಲಿ resortಗಳನ್ನು ಮಾಡಿಕೊಂಡಿದ್ದಾರೆ ಅವುಗಳನ್ನು ತೆಗೆಯಲಿಕ್ಕಾಗಿ ಕೊಪ್ಪಳದ ಜಿಲ್ಲಾಧಿಕಾರಿಗಳಿಗೆ ಮತ್ತು ವರಿಷ್ಠ ಪೊಲೀಸ್ ಅಧಿಕಾರಿಗಳಿಗೆ ನಾವು ಸೂಚನೆ ಕೊಟ್ಟಿದ್ದೇವೆ ಈಗ ಅವರೆಲ್ಲರ ಮೇಲೆ ನಾವು ಕ್ರಮ ಕೈಗೊಂಡಿದ್ದಾರೆ ಕೆಲವನ್ನು ಈಗ ಧ್ವಂಸಗೊಳಿಸುತ್ತಿದ್ದಾರೆ ಇದರ ಜೊತೆಗೆ, ಮುಖ ಮಂಟಪದ ಮುಂದೆ ಇರತಕ್ಕಂಥ ರಥ ಬೀದಿಯಲ್ಲಿ ಆ ಎಲ್ಲ ಅಂಗಡಿ ಮುಂಗಟ್ಟುಗಳನ್ನು ತೆಗೆಸುವಂಥ ಕೆಲಸವನ್ನು ಕೂಡ ಈಗ ಮಾಡುತ್ತಿದ್ದಾರೆ ಇದರ ಜೊತೆಗೆ, ಅಲ್ಲಿ ಮೊದಲಿನಿಂದಲೂ ಕೂಡ ಇಂಥ ವಿಧ್ವಂಸಕ ಕೃತ್ಯಗಳಿಗೆ ಪ್ರಚೋದನೆ ಕೊಡತಕ್ಕಂಥ ರೀತಿಯ ಸಂಶಯಾಸ್ಪದ ವ್ಯಕ್ತಿಗಳು ಕಾಶ್ಮೀರ ಮೂಲದವರು ಅಂಗಡಿಯನ್ನು ತೆರೆದಿದ್ದರು ಎಲ್ಲ ಕಾಶ್ಮೀರ ಮೂಲದವರೂ ಈ ತರಹ ತಪ್ಪು ಮಾಡಿದ್ದಾರೆಂದು ಹೇಳುವುದಕ್ಕೆ ನಾನು ತಯಾರಿಲ್ಲ ಒಬ್ಬ ಭಯೋತ್ಪಾದಕ ಆ ಮೂಲದಿಂದ ಬಂದಂಥವನು ಹಂಪಿಯ ಪರಿಸರದಲ್ಲೇ ಇದ್ದ ಆತ ಕೊಟ್ಟಂಥ ಮಾಹಿತಿಯ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಿಕ್ಕೆ ಪ್ರಾರಂಭ ಮಾಡಿದ ಮೇಲೆ ಸ್ವಇಚ್ಛೆಯಿಂದಲೇ ಅಲ್ಲಿಂದ ಬಹಳ ಜನ ವಾಪಸ್ ಹೋಗುತ್ತಿದ್ದಾರೆ ಶುಚಿತ್ವವನ್ನು ಕಾಪಾಡದಂಥ ಏನು ಹೋಟೆಲ್‌ಗಳಿವೆ, ಅವುಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಅಲ್ಲಿಯ ಗ್ರಾಮ ಪಂಚಾಯತಿಯವರಿಗೆ ಕೂಡ ತಿಳಿಸಿದ್ದೇವೆ Notice ಅನ್ನು ಕೂಡ ಕೊಟ್ಟಿದ್ದಾರೆ ಹಂಪಿ ಅಭಿವೃದ್ಧಿ ಪ್ರಾಧಿಕಾರದವರು ಅವುಗಳನ್ನು ಮುಚ್ಚುವ ಪ್ರಯತ್ನ ಮಾಡಿದಾಗ ಕೆಲವರು High Court ಗೆ ಹೋಗಿ stay order ತಂದಿದ್ದಾರೆ ಆದರೆ, ತಾವು ಹೇಳಿದಂತೆ, ಕೆಲವು ಅಹಿತಕರ ಘಟನೆಗಳ ಪೈಕಿ ಅಲ್ಲಿ ದರ್ಗಾ ಮಾಡಿದ್ದಾರೆ ಮತ್ತೊಂದು ಎಂದು ಆ ಲೇಖನದಲ್ಲಿ ಬಂದಿರುವುದನ್ನು ಹೇಳಿದ್ದೀರಿ ಆದರೆ, ಅವರಿಗೆ ಬಹುತೇಕವಾಗಿ ಕೆಲವರಿಗೆ ತಮ್ಮದೇ ಆದಂಥ ಅಭಿಪ್ರಾಯಗಳಿರಬಹುದು ಕಟಿಗೆ

ಅಹಮದ್‌ಖಾನ್ ಎನ್ನುವವರು ಒಬ್ಬ ದಂಡನಾಯಕರಾಗಿದ್ದರು ಬಹಮನಿ ಅರಸರ ಕಡೆಗೆ ಎಷ್ಟು ಮಂದಿ ಮುಸ್ಲಿಂರಿದ್ದರೋ ಅಷ್ಟೇ ಪ್ರಮಾಣದಲ್ಲಯೂ ಕೂಡ ವಿಜಯನಗರದ ಅರಸರ ಕಾಲದಲ್ಲಿ ಮುಸ್ಲಿಂ ಯೋಧರೂ ಕೂಡ ಇದ್ದರು ಸೂರ್ಯ ಚಂದ್ರರು ಇರುವವರೆಗೂ ನಮ್ಮ ರಾಯರಿಗೆ ಒಳ್ಳೆಯದಾಗಲಿ ಎಂದು ಛತ್ರ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ನಾನು ಮಾಡಿದ್ದೇನೆಂದು ಕಟಿಗೆ ಅಹಮದ್‌ಖಾನ್‌ರವರು ಕಟ್ಟಿಸಿರತಕ್ಕಂಥ ಛತ್ರವಿದೆ, ಬಾವಿ ಇದೆ, ಶಿಲಾ ಶಾಸನಗಳೂ ಕೂಡ ಇವೆ ಆದ್ದರಿಂದ ಬಹಳ ಸೌಹಾರ್ದಯುತವಾದಂಥ ವಾತಾವರಣ ಅಲ್ಲಿತ್ತು ಇತ್ತೀಚೆಗೆ ಬಂದಿರತಕ್ಕಂಥ ಅನೇಕ ವರದಿಗಳ ಪ್ರಕಾರ ಮುಸ್ಲಿಮರು ಬಂದ ಮೇಲೆ, ಅಲ್ಲಿ ಅವರು ಬಂದು ಧ್ವಂಸ ಮಾಡುವುದಕ್ಕಿಂತ ಪೂರ್ವದಲ್ಲೇ ನಮ್ಮವರು ಯಾವ ರೀತಿ ಧ್ವಂಸ ಮಾಡಿದರು, ಸೋತ ಸುದ್ದಿ ಬಂದ ತಕ್ಷಣವೇ ಏನೆಲ್ಲಾ ಆಯಿತು, ಎಷ್ಟು ಪ್ರಮಾಣದಲ್ಲಿರತಕ್ಕಂಥ ಸಂಪತ್ತನ್ನು ಚಂದ್ರಗಿರಿಗೆ ಮತ್ತು ಪೆನುಗೊಂಡಕ್ಕ ತೆಗೆದುಕೊಂಡು ಹೋದರೆನ್ನತಕ್ಕಂಥದ್ದು ಈಗ ಪುರಾವೆಗಳ ಮೂಲಕವಾಗಿ ಹೊರಗಡೆಗೆ ಬರುತ್ತಿದೆ ಆದ್ದರಿಂದ ಒಂದೇ ದೃಷ್ಟಿಕೋನದಿಂದ ಅದನ್ನು ನೋಡತಕ್ಕದ್ದಲ್ಲ ಈಗಾಗಲೇ ಅಲ್ಲಿ Police Station ಅನ್ನು ಸ್ಥಾಪನೆ ಮಾಡಿದ್ದೇವೆ ಇಲ್ಲಿಯವರೆಗೂ ಪುರಾತತ್ವ ಇಲಾಖೆಯವರು ಅಲ್ಲಿ ಹೊಸ ಕಟ್ಟಡ ನಿರ್ಮಾಣ ಮಾಡಲು ಅವಕಾಶ ಕೊಡುತ್ತಿರಲಿಲ್ಲ ಆದರೆ ಅಲ್ಲಿ Police Station ಮಾಡಲಿಕ್ಕೆ ಅವರು ಅವಕಾಶ ಮಾಡಿಕೊಟ್ಟಿದ್ದಾರೆ ಈಗಾಗಲೇ ಅಲ್ಲಿಗೆ Police Station ಮಂಜೂರಾತಿಯಾಗಿರುವುದರಿಂದ, ಅದನ್ನು ಅಲ್ಲಿ ಸ್ಥಾಪನೆ ಮಾಡುತ್ತೇವೆ ಅಬಕಾರಿ ಇಲಾಖೆಯವರಿಂದ ಈಗಾಗಲೇ ಅಲ್ಲಿ ಬಹಳ ಸಲ ಅವರ ಮೇಲೆ ನಾವು ರೈಡ್‌ಗಳನ್ನು ಮಾಡಿಸಿದ್ದೇವೆ ಅಲ್ಲಿ ಯಾವುದೇ ಸಾರಾಯಿ ಅಥವಾ ಮದ್ಯದ ಅಂಗಡಿಗಳನ್ನು ತೆರೆಯಲು ಲೈಸೆನ್ಸ್ ನೀಡಿಲ್ಲ ಅದಕ್ಕೆ ಅಲ್ಲಿ ಅವಕಾಶ ಮಾಡಿಕೊಟ್ಟಿಲ್ಲ ಕಮಲಾಪುರ ಮೊದಲಾದ ನಗರ ಪ್ರದೇಶಗಳಲ್ಲಿ ಅಥವಾ ಪುರಸಭೆ ವ್ಯಾಪ್ತಿಯಲ್ಲಿ ಹೋಗಿ ಬರಬಹುದು ಆ ಕಾರಣಕ್ಕಾಗಿ, ಆ ಲೇಖನದಲ್ಲಿ ಕೆಲವು ಒಳ್ಳೆಯ ಸಂಗತಿಗಳಿವೆ, ಕೆಲವು ತಪ್ಪಾಗಿರತಕ್ಕದ್ದು ಇವೆ ಅಲ್ಲಿಯ ಸ್ಥಳೀಯ ಸ್ವಾಮಿಗಳೆಲ್ಲರೂ ಕಲೆತು, ಸುಮಾರು ನೂರಕ್ಕಿಂತ ಹೆಚ್ಚು ಸ್ವಾಮಿಗಳು

ಮತ್ತು ಸಾರ್ವಜನಿಕರು ಕಲೆತು, ಹಂಪಿಯಿಂದ ಹೊಸಪೇಟೆಯವರೆಗೂ ಪಾದಯಾತ್ರೆಯನ್ನು ಮಾಡಿದರು ಈಗ ಚರಸ್ ಇತ್ಯಾದಿಗಳ ವಿಚಾರದಲ್ಲಿ ಬಹಳ ಬಿಗಿಯಾದ ಕ್ರಮವನ್ನು ಕೊಪ್ಪಳ ಮತು ಬಳ್ಳಾರಿ ಜಿಲ್ಲಾಧಿಕಾರಿಗಳು ಕೈಗೊಳ್ಳುತ್ತಿದ್ದಾರೆ ಪುರಾತತ್ವ ಇಲಾಖೆಯಿಂದಲೂ ಸಹ ಕೆಲವೊಂದು ಸಲ ಇಂತಹ ಘಟನೆಗಳು ಆಗಬಾರದೆಂದು ಬಹಳ ಸ್ಪಷ್ಟವಾಗಿರತಕ್ಕಂಥ ಉದ್ದೇಶವನ್ನು ಹೊಂದಿದ್ದಾರೆ ಈಗ ಉದಾಹರಣೆಗೆ ಹೇಳುವುದಾದರೆ, ಹಜಾರ್ ರಾಮಸ್ವಾಮಿ ದೇವಾಲಯದಲ್ಲಿ ಕೆಲವು ಮುಸಲ್ಮಾನರು ನಮಾಜನ್ನು ಮಾಡಿದರು ಎಂದು ಪತ್ರಿಕೆಯೊಂದರಲ್ಲಿ ಹೇಳಿಕೆ ಬಂದಿತ್ತು ಅದರ ಬಗ್ಗೆ ದಾಖಲೆಗಳನ್ನು ಕೊಡುತ್ತೇವೆಂದು ಕೆಲವೊಂದು ಫೋಟೋಗಳನ್ನು ಕೊಟ್ಟರು ಆ ಫೋಟೋಗಳೆಲ್ಲವೂ ಕೂಡ ಹಿಂಭಾಗದಿಂದ ತೆಗೆಯಲ್ಪಟ್ಟಿದ್ದವು ಮುಂಭಾಗದಿಂದ ತೆಗೆಯಲ್ಪಟ್ಟ ಫೋಟೋಗಳು ಅದರಲ್ಲಿ ಒಂದೂ ಇರಲಿಲ್ಲ ಇದ್ದಂತಹ ಫೋಟೋಗಳಲ್ಲೂ ಕೂಡ ಕೇವಲ 7 ಜನ ಮಾತ್ರ ಇದ್ದರು ಆಮೇಲೆ ನಾವು ಪುರಾತತ್ವ ಇಲಾಖೆಯ ಕಾವಲುಗಾರ ಮತ್ತು ಪುರಾತತ್ವ ಇಲಾಖೆಯನ್ನು ಆ ಬಗ್ಗೆ ಕೇಳಿದರೆ, ಅಂತಹ ಯಾವುದೇ ಘಟನೆಯೂ ಕೂಡ ಇಲ್ಲಿ ನಡೆದಿಲ್ಲ ಎಂಬ ವರದಿಯನ್ನು ಅವರು ಕೊಟ್ಟರು ಪುರಾತತ್ವ ಇಲಾಖೆ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ ಆದ್ದರಿಂದ ಈ ವಿಚಾರಗಳಲ್ಲಿ ನಾವು ಭಾವೋದ್ವೇಗಕ್ಕೆ ಒಳಗಾಗದೆ, ಈ ಪುರಾತತ್ವ ಇಲಾಖೆಯವರು ಮತ್ತು ನಾವೆಲ್ಲರೂ ಸೇರಿ, ಅಲ್ಲಿ ಸಾರ್ವಜನಿಕ ಶಾಂತಿಯನ್ನು ಕಾಪಾಡತಕ್ಕದ್ದು ಕೋಮು ಗಲಭೆಗೆ ಅವಕಾಶವಿಲ್ಲದಂತೆ ನೋಡಿಕೊಳ್ಳತಕ್ಕದ್ದು, ಮಾದಕ ದ್ರವ್ಯಗಳು ಮತ್ತು ದುಶ್ಚಟಗಳಿಗೆ ಒಳಗಾಗದಂತೆ ನೋಡಿಕೊಳ್ಳತಕ್ಕ ಅಗತ್ಯವಿದೆ ಗೋವಾ, ಗೋಕರ್ಣ ಹಾಗೂ ಹಂಪಿ ಈ circuit ನಲ್ಲಿ ಬರತಕ್ಕಂಥ ಯಾತ್ರಾರ್ಥಿಗಳು ವಿಲಾಸಿ ಜೀವನಕ್ಕಾಗಿಯೇ ಬರುತ್ತಾರೆ ಮತ್ತು ಕೆಳ ಮಧ್ಯಮ ವರ್ಗದ ಜನ ಮಾತ್ರ ಬರುತ್ತಾರೆ ಅಲ್ಲಿ ಯುರೋಪ್‌ನಿಂದ ಬರತಕ್ಕಂಥ ಜನ, ಯಾರೂ ಕೂಡ ಗಂಭೀರವಾದ ಅಧ್ಯಯನಶೀಲರಲ್ಲ, ಶಿಲ್ಪಕಲೆ ಬಗ್ಗೆ ಗ್ರೊತ್ತಿರತಕ್ಕಂಥವರಲ್ಲ, ಇತಿಹಾಸ ಗೊತ್ತಿರತಕ್ಕಂಥವರಲ್ಲ ಇಲ್ಲಿ ಗಾಂಜಾ, ಚರಸ್ ಮೊದಲಾದವುಗಳನ್ನು ಕಲ್ಲು ಬಂಡೆಗಳ ನಡುವೆ ಕುಳಿತು ಸೇವಿಸಿ ಈ ದ್ವೀಪಗಳಲ್ಲಿ ಸುಖವಾಗಿ ಬದುಕಬಹುದು ಎಂಬ ಕಾರಣಕ್ಕಾಗಿಯೇ ಅಲ್ಲಿಗೆ ಬಹಳ ಜನ ಬರುತ್ತಿದ್ದಾರೆ ಅಲ್ಲಿ ಬಹಳಷ್ಟು

ಕೊಲೆ, ಸುಲಿಗೆಗಳು ಆಗುತ್ತಿದ್ದವು ಈಗ 2–3 ವರ್ಷಗಳಿಂದ ಅವು ನಿಂತಿವೆ ನಾನೂ ಕೂಡ ಹೋಗಿ ಪೊಲೀಸರ ತರಹ ಅಲ್ಲಿನ ಹೋಟೆಲ್‌ಗಳನ್ನೆಲ್ಲಾ ಚೆಕ್ ಮಾಡಿದೆ ನಾನು ಪೊಲೀಸ್ ಸ್ಟೇಷನ್‌ಗೂ ಕೂಡ ಹೋಗಿ ದಾಖಲೆಗಳನ್ನೆಲ್ಲಾ ಚೆಕ್ ಮಾಡಿ ಬಂದಿದ್ದೇನೆ ಆದ್ದರಿಂದ ತಾವು ಹೇಳಿರುವುದನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ ಎಂದು ನಾನು ಸದನಕ್ಕೆ ಮಾತು ಕೊಡುತ್ತಿದ್ದೇನೆ

ಶ್ರೀ ಸಿ ಟಿ ರವಿ – ಅಕ್ರಮ ಕಟ್ಟಡಗಳನ್ನು ತೆರವುಗೊಳಿಸುವ ಕೆಲಸ ಯಾವಾಗ ಮುಗಿಯುತ್ತದೆ? ಅಲ್ಲಿ ಈಗ 60ಕ್ಕೂ ಹೆಚ್ಚು ಅನಧಿಕೃತ ಕಟ್ಟಡಗಳಿವೆ ಎಂದು ಇಲ್ಲಿ ಪೂರ್ಣ ವರದಿಯನ್ನು ಕೊಟ್ಟಿದ್ದಾರೆ ಅವುಗಳನ್ನೆಲ್ಲಾ ಯಾವಾಗ ತೆರವುಗೊಳಿಸುತ್ತೀರಿ?

ಶ್ರೀ ಎಂ ಪಿ ಪ್ರಕಾಶ್ – ಕಾನೂನಿನ ಪ್ರಕಾರ ಹಂಪಿ ಪ್ರಾಧಿಕಾರದ ಅಧ್ಯಕ್ಷರು ಅವರಿಗೆ ನೋಟೀಸ್ ಅನ್ನು ಕೊಟ್ಟಿದ್ದಾರೆ ಹಂಪಿಯ ಪಂಚಾಯಿತಿಯವರೂ ಕೂಡ ನೋಟೀಸ್ ಅನ್ನು ಕೊಟ್ಟಿದ್ದಾರೆ ಕೆಲವರು ಮಾತ್ರ ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ ಅದರ ಬಗ್ಗೆ ತತ್‌ಕ್ಷಣದಲ್ಲಿ ನನಗೆ ವಿವರಗಳು ಗೊತ್ತಿಲ್ಲ ಆದರೆ ಖಂಡಿತವಾಗಿಯೂ ಕೂಡ ಅತಿಕ್ರಮಣ ಮಾಡಿರತಕ್ಕವರ ಮೇಲೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ

(ಊ) ಆರಾಧನಾ ಯೋಜನೆಯಡಿಯಲ್ಲಿ ತಾಲ್ಲೂಕು ಕಚೇರಿಗಳಲ್ಲಿದ್ದ 1992ನೇ ಇಸವಿಯಿಂದ 2005–06 ರವರೆಗೆ ಇದ್ದ ಹಣವನ್ನು ವಾಪಸ್ ಪಡೆದಿರುವ ಬಗ್ಗೆ

ಶ್ರೀ ಹೆಚ್ ಎಂ ವಿಶ್ವನಾಥ್ (ಸಕಲೇಶಪುರ) – ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಸರ್ಕಾರದವರು ಆದೇಶವೊಂದನ್ನು ಹೊರಡಿಸಿ, ಆರಾಧನಾ ಯೋಜನೆ ಅಡಿಯಲ್ಲಿ 1992ನೇ ಇಸವಿಯಿಂದ 2005–06ರವರೆಗೆ ಏನು ಹಣ, ಆಯಾಯ ತಾಲ್ಲೂಕು ಕಚೇರಿಗಳಲ್ಲಿ ಇತ್ತೋ, ಆ ಹಣವನ್ನೆಲ್ಲಾ ಸರ್ಕಾರದವರು ಪೂರ್ತಿಯಾಗಿ ವಾಪಸ್ ಪಡೆಯುವಂತಹ ಕೆಲಸ ಮಾಡಿದೆ ಇದರಿಂದ ರಾಜ್ಯದ 27 ಜಿಲ್ಲೆಗಳಿಂದ ಸುಮಾರು 20 75 ಕೋಟಿ ರೂಪಾಯಿಗಳಷ್ಟು ಹಣವನ್ನು ಸರ್ಕಾರದವರು ವಾಪಸ್ ಪಡೆದಿದ್ದಾರೆ ದಯಮಾಡಿ ನಾನು ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ, ಈ ಹಣವನ್ನು ಬಳಸಿಲ್ಲ ಸರಿ, ಆದರೆ ಅದನ್ನು ವಾಪಸ್ ಪಡೆಯಬೇಡಿ ನಮಗೆ